ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಮದ್ಯ ಮಾರಾಟ ಮಳಿಗೆಯನ್ನು ಹೊಸದಾಗಿ ಸ್ಥಾಪಿಸುವ ಬಗ್ಗೆ

ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶನ ಹೊಂದಿದವರು) –

516 (479) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದಲ್ಲಿ ಮದ್ಯ ಮಾರಾಟ ಮಳಿಗೆಯನ್ನು ಹೊಸದಾಗಿ ಆರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

(ಆ) ಇದ್ದಲ್ಲಿ, ಯಾವ ಆಧಾರದ ಮೇಲೆ ಮದ್ಯದಂಗಡಿಗಳು ಮತ್ತು M.S.I.L ಆರಂಭಿಸಲಾಗುವುದು; (ವಿವರ ನೀಡುವುದು)

(ಇ) ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಕ್ಲಬ್‌ಗಳು ಮಾರ್ಚ್‌ನಿಂದ ಆಗಸ್ಟ್ ಅಂತ್ಯದವರೆಗೂ ಮುಚ್ಚಲ್ಪಟ್ಟಿದ್ದು, ಪ್ರಸ್ತುತ ವಹಿವಾಟು ಇಲ್ಲದಿರುವುದರಿಂದ ಪುನರ್ ನವೀಕರಣವನ್ನು ತಾತ್ಕಾಲವಧಿಗೆ ಮುಂದುವರೆಸುವ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುವುದೇ ? (ವಿವರ ನೀಡುವುದು)